ರೇಶ್ಮಾ ಭಟ್
ಕಲೆ: ರೂಪಶ್ರೀ ಕಲ್ಲಿಗನೂರ್

# ಕಸಬರಿಗೆಯೆಂಬ ಕಸವರ

ಗುಡಿಸಿದರೆ ಕಸವಿರಬಾರದು
ಬಡಿಸಿದರೆ ಹಸಿವಿರಬಾರದು
ಪ್ರೀತಿಸಿದರೆ ಮದುವೆಯಾಗಬಾರದು.

ಮಧ್ಯಮ ಪಾಂಡವ ಅರ್ಜುನನಷ್ಟೇ ಸುಂದರವಾದ ದೇಹವಿನ್ಯಾಸ ಹೊಂದಿದ್ದ ಧನಂಜಯನೆಂಬ ಪೋರ ತನ್ನ ತರಗತಿಯ ಕಸ್ತೂರಿ ಎಂಬ ಪೋರಿಗೆ ಹತ್ತನೇಯತ್ತೆಯ ಕೊನೆಯಲ್ಲಿ ಬರೆದ ಆಟೋಗ್ರಾಫ್ ಇದು. ಇದನ್ನು ಅವಳು ಕ್ಲಾಸ್ ಟೀಚರ್ ಕುಳ್ಳಿ ರುಕ್ಮಿಣಿಗೆ ತೋರಿಸಿ, ಅದು ಅಲ್ಲಿಂದ ಹೆಡ್ ಟೀಚರ್ ದಪ್ಪ ರುಕ್ಮಿಣಿಯವರ ರೆಡ್ ಟೇಬಲ್ಲಿಗೆ ಹೋಗಿ, ಧನಂಜಯನಿಂದ ಅಪಾಲಜಿ ಪತ್ರ ಬರೆಸುವಲ್ಲಿಗೆ ಬಂದು ಮುಗಿದಿತ್ತು. ಹೆಡ್ ಟೀಚರಿನ ರೆಡ್ ಟೇಬಲಿನ ಮೇಲೆ ಬಿಳಿಹಾಳೆಯನ್ನು ಇರಿಸಿದ ಧನಂಜಯ 'ಇನ್ನು ಮುಂದೆ, ಪ್ರೀತಿಸಿದರೆ ಮದುವೆಯಾಗಲೇಬೇಕು ಎಂದೇ ಬರೆಯುತ್ತೇನೆ' ಎಂದು ಬರೆದು ಕೊಟ್ಟು ಬಂದಿದ್ದ. ಅದಾಗಲೇ ಎಷ್ಟೋ ಜನ ಬರೆದೂ ಬರೆದೂ ಸವಕಲಾಗಿದ್ದ ಈ ಆಟೋಗ್ರಾಫ್‌ನಲ್ಲಿರುವ ತಪ್ಪೇನು ಎಂಬುದು ಬೆಪ್ಪುಗಳಾದ ನಮ್ಮ ತಲೆಗೆ ಕೊನೆಗೂ ಅರ್ಥವಾಗಲಿಲ್ಲ. ಆಮೇಲೆ ಧನಂಜಯ ಕಸ್ತೂರಿಯ ಆಟೋಗ್ರಾಫ್ ಇಸಿದುಕೊಂಡು,

ಗುಡಿಸಿದರೆ ಕಸವಿರಬೇಕು
ಬಡಿಸಿದರೆ ಹಸಿವಿರಬೇಕು
ಪ್ರೀತಿಸಿದರೆ ಮದುವೆಯಾಗಲೇಬೇಕು...
ಆದರೆ ಪ್ರೀತಿಸಿದವರನ್ನಲ್ಲ

ಎಂದು ಬರೆದು ಅದರ ಕೆಳಗೆ ಕಸಬರಿಗೆ ಝಳಪಿಸುವ ಕೋರೆ ಹಲ್ಲಿನ ಭೂತದ ಚಿತ್ರ ಬರೆದು, 'ಹೋಗು ಇದನ್ನೂ ನಿನ್ನ ಆ ಕುಳ್ಳಿ ಟೀಚರಿಗೆ ತೋರಿಸು' ಅಂತ ರೋಪ್ ಹಾಕಿ ಬಂದಿದ್ದ. ಮರುದಿನ ಕರಿ ಬೋರ್ಡಿನ ಮೇಲೂ ಅವತರಿಸಿದ್ದ ಈ ಕಸಬರಿಗೆ ಕೋರೆಹಲ್ಲಿನ ಭೂತ ನಮ್ಮೆಲ್ಲರನ್ನೂ ಗಹಗಹಿಸಿ ಹೆದರಿಸಿತ್ತು. ಆದರೂ ಕಸ್ತೂರಿ ಹಾಗೆ ಯಾಕೆ ಮಾಡಿದಳು? ಅವಳಿಗೆ ಧನಂಜಯನ ಮೇಲೆ ಪ್ರೀತಿ ಇತ್ತೇ? ಇಂಥದ್ದೆಲ್ಲ ಪ್ರಶ್ನೆಗಳು ಆಗ ನಮ್ಮೆಲ್ಲರ ತಲೆಯನ್ನೂ ಹಾಳುಗೆಡವಿತ್ತು. ಕಸ ನೋಡುವಾಗಲೆಲ್ಲ ಕಸಬರಿಗೆ ನೆನಪಾಗುವಂತೆ, ಕಸಬರಿಗೆ ನೋಡುವಾಗ ಒಮ್ಮೊಮ್ಮೆ ಆ ಬೋರ್ಡಿನ ಭೂತವೇ ಕಾಣಿಸಿಕೊಂಡು ಈ ಘಟನೆಯನ್ನು ಜ್ಞಾಪಿಸುತ್ತಿರುತ್ತದೆ.

ಪ್ರಜ್ಞೆ ಬಂದಲ್ಲಿಂದ ಇದು ನನ್ನ ಸಂಗಾತಿ. 'ಶ್ರೀ ಗುರುವಿನ ಸಂಗವ ಮಾಡಿ ಶಿಷ್ಯ ಶ್ರೀಗುರುವಪ್ಪುದು